# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

"ಸಾರಿಗೆ ಭವನ" ಕೇಂದ್ರ ಕಛೇರಿ, ಕೆ.ಹೆಚ್.ರಸ್ತೆ, ಶಾಂತಿ ನಗರ, ಬೆಂಗಳೂರು-560 027.
ಸಂಚಾರ (ವಾಣಿಜ್ಯ) ಇಲಾಖೆ.

**ಸಂ:ಕರಾಸಾ:ಕೇಕ:ಸಂ:ಸಿ2:335: 270 :2021-22** **ದಿನಾಂಕ: 21.06.2021**

## ಸುತ್ತೋಲೆ

ವಿಷಯ: ಮಾಸಿಕ ಬಸ್ ಪಾಸ್ ಅವಧಿಯನ್ನು ವಿಸ್ತರಿಸುವ ಬಗ್ಗೆ.
ಉಲ್ಲೇಖ: 1. ಸಂ:ಕರಾಸಾ:ಕೇಕ:ಸಂ:ಸಿ2:335:120:2021-22 ದಿನಾಂಕ: 17.04.2021.
2. ಸಂ:ಕರಾಸಾ:ಕೇಕ:ಸಂ:ಸಿ2:335:168:2021-22 ದಿನಾಂಕ: 26.04.2021.

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ: 07.04.2021 ರಿಂದ ನಿಗಮದ ಕೆಲವು ಚಾಲನಾ ಸಿಬ್ಬಂದಿಗಳ ಅನಿರ್ಧಿಷ್ಟಾವಧಿ ಮುಷ್ಕರ ಹಾಗೂ ದಿನಾಂಕ: 28.04.2021 ರಿಂದ ಸರ್ಕಾರವು ಜನತಾ ಕರ್ಫ್ಯೂ / ಲಾಕ್‌ಡೌನ್ ಘೋಷಿಸಿದ ಕಾರಣ ಸಾರ್ವಜನಿಕ ಪ್ರಯಾಣಿಕರಿಗೆ ಅನಾನುಕೂಲವಾಗಿರುವುದನ್ನು ಗಮನದಲ್ಲಿರಿಸಿ, ಮುಷ್ಕರದ ಅವಧಿ ಹಾಗೂ ಲಾಕ್‌ಡೌನ್ ಪ್ರಾರಂಭದ ಅವಧಿಯಲ್ಲಿ ಮಾಸಿಕ ಬಸ್ ಪಾಸುಗಳು ಚಾಲ್ತಿಯಲ್ಲಿದ್ದು, ಲಾಕ್‌ಡೌನ್ ನಂತರದ ದಿನಾಂಕಗಳಂದು ಅವಧಿ ಮುಕ್ತಾಯಗೊಂಡ **ಹಂತವಾರು ಮಾಸಿಕ ಪಾಸುಗಳ ಮಾನ್ಯತಾ ಅವಧಿಯನ್ನು ವಿಸ್ತರಿಸಲಾಗಿದೆ.** ಈ ವಿನಾಯಿತಿಯು ಮಾಸಿಕ ಬಸ್ ಪಾಸ್ ಚಾಲ್ತಿಯಲ್ಲಿರುವ ಉಳಿದ ಅವಧಿಗೆ ಅಥವಾ ಗರಿಷ್ಟ 18 ದಿನಗಳವರೆಗೆ ಅಂದರೆ ದಿನಾಂಕ: 08.07.2021 ರ ವರೆಗೆ ಚಾಲ್ತಿಯಲ್ಲಿರುತ್ತದೆ. ಹಾಗೆಯೇ ದಿನಾಂಕ: 08.04.2021 ರಿಂದ 27.04.2021 ರ ಅವಧಿಯಲ್ಲಿ ಮಾಸಿಕ ಪಾಸುಗಳನ್ನು ಪಡೆದಿದ್ದಲ್ಲಿ, ಅಂತಹ ಪ್ರಯಾಣಿಕರಿಗೆ ದಿನಾಂಕಗಳನ್ನು ಸೂಕ್ತವಾಗಿ ಪರಿಶೀಲಿಸಿ, ಅಷ್ಟು ದಿನಗಳಿಗೆ ಅನುಗುಣವಾಗಿ ವಿಸ್ತರಿಸಲು ಕ್ರಮವಹಿಸುವುದು. ಈ ಆದೇಶವು ಕೂಡಲೇ ಜಾರಿಗೆ ಬರಲಿದೆ.

ಈ ಸಂಬಂಧ ಪಾಸುದಾರರು ಪಾಸು ವಿತರಣೆಯ ಕೌಂಟರ್‌ನಲ್ಲಿ ಚಾಲ್ತಿ ಅವಧಿಯ ದಿನಗಳಿಗೆ ವಿಸ್ತರಣೆಯಾಗಿರುವ ಬಗ್ಗೆ ವಿಸ್ತರಣಾ ದಿನಾಂಕ, ಸಹಿ ಹಾಗೂ ಮೊಹರನ್ನು ಹಾಕಿಸಿಕೊಳ್ಳುವುದು.

ಈ ಕ್ರಮದ ಬಗ್ಗೆ ಎಲ್ಲಾ ಚಾಲನಾ ಸಿಬ್ಬಂದಿಗಳಿಗೆ ಮಾಹಿತಿ ಒದಗಿಸಲು ಕ್ರಮಕೈಗೊಂಡು ಪ್ರಯಾಣಿಕರಿಂದ ಯಾವುದೇ ದೂರುಗಳಿಗೆ ಅವಕಾಶ ನೀಡದಂತೆ ಕ್ರಮವಹಿಸಲು ಹಾಗೂ ಈ ಸಂಬಂಧ ಅನುಸರಣಾ ವರದಿಯನ್ನು ಕಳುಹಿಸುವುದು.

ವ್ಯವಸ್ಥಾಪಕ ನಿರ್ದೇಶಕರು

✓ಪ್ರತಿಯನ್ನು:

1. ಮಾನ್ಯ ಅಧ್ಯಕ್ಷರು, / ಮಾನ್ಯ ಉಪಾಧ್ಯಕ್ಷರು, ಕರಾರಸಾ ನಿಗಮ, ರವರ ಆಪ್ತ ಕಾರ್ಯದರ್ಶಿಗಳು, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
2. ಹಿರಿಯ ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು / ನಿರ್ದೇಶಕರು (ಭ&ಜಾ) / ನಿರ್ದೇಶಕರು (ಸಿ&ಪ) ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
3. ಮುಖ್ಯ ಸಂಚಾರ ವ್ಯವಸ್ಥಾಪಕರು, ವಾ.ಕ.ರ.ಸಾ.ಸಂಸ್ಥೆ / ಈ.ಕ.ರ.ಸಾ.ಸಂಸ್ಥೆ, ಕೇಂದ್ರ ಕಛೇರಿ, ಹುಬ್ಬಳ್ಳಿ / ಕಲಬುರ್ಗಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
4. ಮುಖ್ಯ ಸಂಚಾರ ವ್ಯವಸ್ಥಾಪಕರು (ಕಾ), ಕ.ರಾ.ರ.ಸಾ. ನಿಗಮ, ಕೇಂದ್ರ ಕಛೇರಿ ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಅಗತ್ಯ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
5. ಎಲ್ಲಾ ಇಲಾಖಾ ಮುಖ್ಯಸ್ಥರು, ಕ.ರಾ.ರ.ಸಾ. ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
6. ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕ.ರಾ.ರ.ಸಾ. ನಿಗಮ, ರವರ ಮಾಹಿತಿಗಾಗಿ ಹಾಗೂ ಅಗತ್ಯ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
7. ಎಲ್ಲಾ ವಿಭಾಗೀಯ ಸಂಚಲನಾಧಿಕಾರಿಗಳು / ತನಿಖಾಧಿಕಾರಿಗಳು ಕ.ರಾ.ರ.ಸಾ. ನಿಗಮ, ರವರ ಮಾಹಿತಿಗಾಗಿ ಹಾಗೂ ಅಗತ್ಯ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

ವ್ಯವಸ್ಥಾಪಕ ನಿರ್ದೇಶಕರು